# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, 10 ಫೆಬ್ರವರಿ 2017, ಬೆಂಗಳೂರು, ಸಂಪುಟ 2, ಸಂಚಿಕೆ 10, ಪುಟಗಳು-4. ಸಂಪಾದಕರು : ಜಿ.ಟಿ.ಗೋವಿಂದಪ್ಪ

Kannada monthly, 10 February, 2017, Bengaluru, Vol. 2, No.10. Pages-4, KARKAN24585/10/12 Editor: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription :Annual Rs. 30; Life : Rs. 500/-
Published by: Karnataka Vipassana Prachara Samiti Trust.


## ಧಮ್ಮ ಪದಗಳು

ಕೋ ಸು ಹಾಸೋ, ಕಿಮಾನಂದೋ,
ನಿಚ್ಚಂ ಪಜ್ಜಲಿತೇ ಸತಿ? ಅಂಧಕಾರೇನ ಓ ಸದ್ಧಾ,
ಸದೀಪಂ ನ ಗವೇಸ್ಸಥ?

ಈ ನಗು ಏಕೆ, ಈ ಇಂದ್ರಿಯ ಸುಖಗಳು ಏಕೆ? ನಿರಂತರವಾಗಿ ಉರಿಯುತ್ತಾ ಮತ್ತು ಅಜ್ಞಾನದ ಕತ್ತಲೆಯಲ್ಲಿ ಮುಳುಗಿದ್ದರೂ, ಜ್ಞಾನದ ಬೆಳಕನ್ನು ಏಕೆ ಹುಡುಕುತ್ತಿಲ್ಲ?

**ಧಮ್ಮ ಪದ – 146**

# ಧಮ್ಮ ಚಕ್ರ ಪ್ರವರ್ತನೆ

## ಆಚಾರ್ಯ ಎಸ್.ಎನ್. ಗೋಯಂಕ

## (1924–2013)

(ಜುಲೈ 15, 1968 ರ ಒಂದು ಧಮ್ಮ ಪತ್ರ, ಮಾರ್ಪಾಡುಗಳೊಂದಿಗೆ ಜುಲೈ 2014 ರ ಇಂಗ್ಲೀಷ್ ವಿಪಶ್ಯನ ವಾರ್ತಾ ಪತ್ರದಲ್ಲಿ ಪ್ರಕಟಿಸಲಾಗಿತ್ತು. ಇದು ಅದರ ಕನ್ನಡಾನುವಾದ)

ಎಲ್ಲಾ ಪ್ರೀತಿ ಪಾತ್ರರೇ,

ಧಮ್ಮದ ತಿರುಳನ್ನು ಅರ್ಥ ಮಾಡಿಕೊಳ್ಳಿ ಮತ್ತು ಅದನ್ನು ಅಭ್ಯಾಸ ಮಾಡಿ. ಬೋಧಿಸತ್ವ ಸಿದ್ಧಾರ್ಥ ಗೌತಮನು ಹುಟ್ಟಿದ ದಿನ, ಅವನು ಸಂಪೂರ್ಣ ಜ್ಞಾನೋದಯ ಪಡೆದ ದಿನ ಮತ್ತು ಮಹಾ ಪರಿನಿರ್ವಾಣ (ಸಮ್ಮಾಸಂಬುದ್ಧನ ಮರಣ) ಹೊಂದಿದ ದಿನವಾದ ವೈಶಾಖ ಪೂರ್ಣಿಮೆ ಎಷ್ಟು ಮಹತ್ವದ್ದಾಗಿದೆಯೋ ಆಷಾಢ ಪೂರ್ಣಿಮೆಯೂ ಅಷ್ಟೇ ಮಹತ್ವದ್ದಾಗಿದೆ. ಮಹಾಮಾಯೆಯ ಗರ್ಭ ಪ್ರವೇಶಿಸಲು ***ತುಸಿತ*** ದೇವ ಲೋಕವನ್ನು ತ್ಯಜಿಸಿದ್ದು ಮತ್ತು ಗೃಹಸ್ಥ ಜೀವನವನ್ನು ತ್ಯಜಿಸಿದ್ದು ಈ ಆಷಾಢ ಪೂರ್ಣಿಮೆಯ ದಿನವೇ. ಧಮ್ಮ ಚಕ್ರವನ್ನು ಚಲನೆಯಲ್ಲಿಟ್ಟ ದಿನವೂ ಸಹ ಇದೇ ಆಗಿದೆ. ಈ ಮೂರೂ ಸಂದರ್ಭಗಳ ಪ್ರಾಮುಖ್ಯತೆಯನ್ನು ವಿವರವಾಗಿ ಚರ್ಚಿಸೋಣ.

### ಗರ್ಭಧಾರಣೆಯ ಸಮಯ

ಗರ್ಭಧಾರಣೆಯ ಸಮಯ, ಮಗುವಿನ ಜನನ ಕಾಲದಷ್ಟೇ ಮುಖ್ಯವಾಗಿದೆ. ಜೀವಕ್ಕೆ ಮನಸ್ಸು ಮತ್ತು ದೇಹ ಎರಡೂ ಬೇಕಾಗಿದೆ, ಮತ್ತು ಯಾವಾಗ ಇವೆರಡೂ ಪ್ರತ್ಯೇಕವಾಗುತ್ತವೆಯೋ, ಯಾವಾಗ ಮನಸ್ಸು ದೇಹದಿಂದ ಬೇರ್ಪಡುತ್ತದೆಯೋ ಆಗ ಸಾವು ಸಂಭವಿಸುತ್ತದೆ. ನಿರ್ಜೀವ ದೇಹ ನಾಲ್ಕು ಅಂಶಗಳಾಗಿ ವಿಘಟನೆ ಹೊಂದುತ್ತದೆ. ಆದರೆ ಮನಸ್ಸು ಮುಂದುವರಿಯುತ್ತದೆ. ವೀರ್ಯಾಣು ಮತ್ತು ಅಂಡಾಣುವಿನ ಸಂಯೋಗದಿಂದ ಹೊಸ ಜೀವ ಪ್ರಾರಂಭವಾಗುವಾಗ, ಅಂದರೆ, ಗರ್ಭಧಾರಣೆಯ ಸಮಯದಲ್ಲಿ, ಮನಸ್ಸು ಇನ್ನೊಂದು ರೂಪ (ಭೌತಿಕ ಶರೀರ) ಅಥವಾ ರೂಪಖಂದದ ಜೊತೆ ನೇರವಾಗಿ ತನ್ನನ್ನು ತಾನು ಜೋಡಿಸಿಕೊಳ್ಳುತ್ತದೆ. ನಿಜವಾದ ಹುಟ್ಟು 9 ಅಥವಾ 10 ತಿಂಗಳ ನಂತರ ಆಗುತ್ತದೆಯಾದರೂ, ಗರ್ಭಧಾರಣೆಯ ಕ್ಷಣದಿಂದಲೇ ಹೊಸ ಜೀವ ಪ್ರಾರಂಭವಾಗುತ್ತದೆ. ***ವಿನಯ ಪಿಟಕ*** (ಭಿಕ್ಖುಗಳಿಗಾಗಿ ಇರುವ ನಿಯಮಗಳ ಪುಸ್ತಕ) ದ ಪ್ರಕಾರ 20 ವರ್ಷಗಳು ತುಂಬಿದ ಮೇಲೆ ಒಬ್ಬ ವ್ಯಕ್ತಿಯು ಭಿಕ್ಖು (ಸಂನ್ಯಾಸಿ) ಆಗಬಹುದು. ಇದಕ್ಕಿಂತ ಮೊದಲೇ ಯಾರಾದರೂ ಭಿಕ್ಖುವಾದರೆ ಅವನನ್ನು ***ಸಾಮಣೇರ*** (ಆರಂಭಿಗ ಅಥವಾ ಅನನುಭವಿ) ಎಂದು ತಿಳಿಯಲಾಗುತ್ತದೆ. 20 ವರ್ಷಗಳ ವಯಸ್ಸನ್ನು ಲೆಕ್ಕ ಹಾಕುವುದು ಹುಟ್ಟಿದ ದಿನದಿಂದಲ್ಲ, ಗರ್ಭಧಾರಣೆಯ ಸಮಯದಿಂದ. ಹುಟ್ಟಿನ ನಿಜವಾದ ಸಮಯಕ್ಕಿಂತ ಗರ್ಭಧಾರಣೆಯ ಸಮಯದ ಪ್ರಾಮುಖ್ಯತೆಯನ್ನು ಇದು ತೋರಿಸುತ್ತದೆ.

ವಿವಿಧ ತತ್ವಶಾಸ್ತ್ರಗಳ ನಂಬಿಕೆಗಳು ಇದ್ದಾಗ್ಯೂ, ವಾಸ್ತವತೆ ಎಂದರೆ, ನಾಮ–ರೂಪ (ಮನಸ್ಸು ಮತ್ತು ಶರೀರ) ನಿರಂತರವಾಗಿ ಉದಯವಾಗುತ್ತದೆ ಮತ್ತು ವ್ಯಯವಾಗುತ್ತದೆ. ಹುಟ್ಟು ಮತ್ತು ಸಾವಿನ ಚಕ್ರವು ಪ್ರತಿಕ್ಷಣವೂ ತಿರುಗುತ್ತಿರುತ್ತದೆ. ಆದರೆ, ಸಾವಿನ ಸಮಯದಲ್ಲಿ ಮನಸ್ಸು (***ಪಟಿಸಂಧಿ***) ಬಹಳ ಪರಿಶುದ್ಧವಾಗಿದ್ದು ಅದು ***ಅರೂಪ – ಬ್ರಹ್ಮಲೋಕ***ದಲ್ಲಿ ಹುಟ್ಟಿದರೆ, ಆಗ ಮುಂದುವರಿಯಲು ಅದಕ್ಕೆ ಭೌತಿಕ ಶರೀರದ ಅವಶ್ಯಕತೆಯಿರುವುದಿಲ್ಲ. ಅಂತಹ ಲೋಕದಲ್ಲಿ ಕೇವಲ ಮನಸ್ಸಿನ ಸಮುಚ್ಚಯ ಉಳಿದಿರುತ್ತದೆ. ಅದು ಶರೀರವಿಲ್ಲದೆ ಜೀವಿಸಿರುವ ಸ್ಥಿತಿ. ಆದರೆ, ಉಳಿದ ಎಲ್ಲಾ ಲೋಕಗಳಲ್ಲಿ– ರೂಪ–ಬ್ರಹ್ಮಲೋಕ, ದೇವಲೋಕ, ಮನುಷ್ಯ ಲೋಕ, ಪಕ್ಷಿಲೋಕ, ಪ್ರಾಣಿಲೋಕ, ಸರೀಸೃಪಲೋಕ, ಪ್ರೇತಲೋಕ, ಅಸುರಲೋಕ ಮತ್ತು ನರಕಗಳಲ್ಲಿ ಜೀವಿಸುವುದಕ್ಕೆ – ಭೌತಿಕ ಶರೀರ (ರೂಪ) ಅವಶ್ಯಕವಾಗಿ ಬೇಕು.

ಭೌತಿಕ ಶರೀರವಿಲ್ಲದೆ ಮನಸ್ಸಿನ ಅಖಂಡ ದ್ರವ್ಯ ಬದುಕಿರಲು ಅಥವಾ ಸುತ್ತಮುತ್ತ ತಿರುಗಾಡಲು ಸಾಧ್ಯವಿಲ್ಲ. ಉದಾಹರಣೆಗೆ, ಅದು ***ಪೇತ*** (ಒಂದು ರೀತಿಯ ಪ್ರೇತ) ಆಗಿ ಹುಟ್ಟಿದರೆ ಪ್ರೇತ ಲೋಕದ ಸೂಕ್ಷ್ಮ ಭೌತಿಕ ಶರೀರದ ಜೊತೆ ತತ್‌ಕ್ಷಣವೇ ಸಂಯೋಗ ಹೊಂದಲೇಬೇಕು. ಅದೇ ತರಹ, ಹೊಟ್ಟೆಯಲ್ಲಿ ಹುಟ್ಟಿದ ಜೀವಿಗಳು, ಗರ್ಭದಲ್ಲಿಯೇ ಜೀವ ಪಡೆಯುತ್ತವೆ. ಇನ್ನಿತರೆ ಜೀವಿಗಳು, ಸಾವಿನ ಸಮಯದಲ್ಲಿನ ಮನಸ್ಸಿನ ಸ್ವಭಾವವನ್ನು ಅವಲಂಬಿಸಿ ಒಂದು ಲೋಕದ ಭೌತಿಕ ವಸ್ತುವಿನ ಜೊತೆಗೆ ತತ್‌ಕ್ಷಣವೇ ಕೂಡಿಕೊಳ್ಳುತ್ತವೆ. ಈ ಭೌತಿಕ ಆಕಾರ ಅಥವಾ ಶರೀರ, ಮಾನವರ, ಪಕ್ಷಿಗಳ ಮತ್ತು ಪ್ರಾಣಿ ಮುಂತಾದವುಗಳ ಶರೀರದ ತರಹ ಗಟ್ಟಿಯಾಗಿರಬಹುದು ಅಥವಾ ಅಸುರರ, ಪ್ರೇತಗಳ, ದೇವತೆಗಳ ಅಥವಾ ಬ್ರಹ್ಮರ ತರಹ ಸೂಕ್ಷ್ಮವಾಗಿರಬಹುದು. ಆದರೆ ಒಂದು ಭೌತಿಕ ಶರೀರ ಅವಶ್ಯಕವಾಗಿ ಬೇಕು. ಈ ಲೋಕಗಳಲ್ಲಿ ಮನಸ್ಸಿನ ಅಖಂಡ ದ್ರವ್ಯ ಶರೀರವಿಲ್ಲದೇ ಅಲೆದಾಡಲು ಸಾಧ್ಯವಿಲ್ಲ. ಸಾವಿನ ಸಮಯದಲ್ಲಿ, ಮನಸ್ಸಿನ ಅಖಂಡ ದ್ರವ್ಯ ಎಲ್ಲೋ ಒಂದು ಕಡೆ ಶರೀರದ ಜೊತೆ ಸೇರಿಕೊಳ್ಳುತ್ತದೆ. ಮನಸ್ಸು ಮತ್ತು ದೇಹದ ಈ ಸಂಪರ್ಕ ಹೊಸ ಜೀವವನ್ನು ಸೃಷ್ಟಿಸುತ್ತದೆ.

ಮನುಷ್ಯ ಮೂರು ಸಾರಿ ಹುಟ್ಟುತ್ತಾನೆ ಎಂಬುದು ಗಮನಾರ್ಹವಾದುದು. ಗರ್ಭಧಾರಣೆಯ ಸಮಯದಲ್ಲಿ, ಹೆರಿಗೆಯಾದಾಗ,

ಮತ್ತು ವಿಪಶ್ಯನದ ಅಭ್ಯಾಸದಿಂದ ಅಜ್ಞಾನದ ಪೊರೆ ಕಳಚಿ ಹೊರ ಬಂದಾಗ ಧಮ್ಮದ ಜನ್ಮ ಪಡೆಯುತ್ತಾನೆ. ಆದ್ದರಿಂದ, ಬೋಧಿಸತ್ವ ಗೋತಮನ ಹುಟ್ಟಿದ ದಿನ ಮತ್ತು ಸಂಪೂರ್ಣ ಜ್ಞಾನೋದಯ ಪಡೆದ ದಿನ ಮುಖ್ಯವಾದಂತೆ ಅವನನ್ನು ಗರ್ಭದಲ್ಲಿ ಧರಿಸಿದ ದಿನವೂ ಸಹ ಮುಖ್ಯವಾಗಿದೆ.

**ಬೋಧಿಸತ್ವ ಸಂನ್ಯಾಸ ಸ್ವೀಕರಿಸಿದ ದಿನ**

ಆಷಾಢ ಪೂರ್ಣಿಮೆಯು ಇನ್ನೊಂದು ಕಾರಣಕ್ಕಾಗಿಯೂ ಸಹ ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ ಈ ದಿನವೇ ರಾಜಕುಮಾರ ಸಿದ್ಧಾರ್ಥನು ಜ್ಞಾನೋದಯವನ್ನು ಹುಡುಕಿಕೊಂಡು ಹೋಗಲು ಗೃಹಸ್ಥ ಜೀವನವನ್ನು ತ್ಯಜಿಸಿದ್ದು. ಈ ಮುನ್ನಡೆಯಲ್ಲಿಯೇ ಜ್ಞಾನೋದಯದ ಬೀಜ ಬಿತ್ತಲ್ಪಟ್ಟಿತು. ಪ್ರಾಪಂಚಿಕ ಸುಖಗಳನ್ನು ಅನುಭವಿಸುತ್ತಾ ಮನೆಯಲ್ಲಿಯೇ ಇದ್ದಿದ್ದರೆ, ಅವನು ಒಬ್ಬ ಬುದ್ಧನಾಗುತ್ತಿರಲಿಲ್ಲ. ಸಕಲ ಜೀವಿಗಳ ಒಳಿತಿಗಾಗಿ ರಾಜಕುಮಾರ ಸಿದ್ಧಾರ್ಥನು ಸಂನ್ಯಾಸ ಜೀವನದ ಕಷ್ಟಗಳನ್ನು ಅನುಭವಿಸಿದ. ತನ್ನ ಸ್ವಂತ ಹಿತಕ್ಕೆ ಮಾತ್ರ ಆಸಕ್ತಿವಹಿಸಿದ್ದರೆ, ಸುಲಭವಾಗಿ ತಾನು ಮುಕ್ತನಾಗಬಹುದಿತ್ತು, ಮತ್ತು ದೀಪಾಂಕರ ಬುದ್ಧನ ಕಾಲದಲ್ಲಿಯೇ, ನಾಲ್ಕು ಅಸಂಖ್ಯೇಯ (ಅಸಂಖ್ಯಾತ) ಮತ್ತು 1,00,000 ಈಅನ್‌ಗಳ (ಅನಂತ ಯುಗಗಳು) ಹಿಂದೆಯೇ ಒಬ್ಬ ಅರಹಂತನಾಗಬಹುದಿತ್ತು. ಆದರೆ ತನ್ನ ಸ್ವಂತ ಹಿತದ ಬಗ್ಗೆ ಮಾತ್ರ ಚಿಂತಿಸುವುದು ಬೋಧಿಸತ್ವನಿಗೆ ಅಸಾಧ್ಯವಾದುದು.

ಲೆಕ್ಕವಿಲ್ಲದಷ್ಟು ಜನ್ಮಗಳಲ್ಲಿ ಕಷ್ಟಗಳನ್ನು ಎದುರಿಸಲು ಸಿದ್ಧವಾಗಿ, ಸಂಪೂರ್ಣ ಜ್ಞಾನೋದಯ ಪಡೆದ ಸಮ್ಮಾಸಂಬುದ್ಧನಾಗಲು ಬೇಕಾಗುವ ಎಲ್ಲಾ ಹತ್ತು ಪಾರಮಿಗಳನ್ನು (ಗುಣಗಳನ್ನು) ಪೂರ್ಣಗೊಳಿಸುವ ಮತ್ತು ಅಸಂಖ್ಯಾತ ಜೀವಿಗಳ ಮುಕ್ತಿಗಾಗಿ ಶ್ರಮಿಸುವ ಕೆಲಸವನ್ನು ಕೈಗೆತ್ತಿಕೊಂಡನು. ಈಗ ತನ್ನ ಕೊನೆಯ ಜನ್ಮದಲ್ಲಿ ಸಂಪೂರ್ಣ ಜ್ಞಾನೋದಯ ಪಡೆಯಲು ಬೋಧಿಸತ್ವನಿಗೆ ಕಾಲ ಪಕ್ವವಾಗಿತ್ತು. ಆದ್ದರಿಂದ, ಬಹುಜನರ ಹಿತಕ್ಕಾಗಿ ಗೃಹಸ್ಥ ಜೀವನವನ್ನು ತ್ಯಾಗ ಮಾಡಿದ ಈ ದಿನ ಬಹಳ ಮಂಗಳಕರವಾಗಿದೆ.

**ಧಮ್ಮ ಚಕ್ರವನ್ನು ಚಲನೆಯಲ್ಲಿಡುವುದು**

ಅಸಂಖ್ಯಾತ ಜೀವಿಗಳ ಪ್ರಯೋಜನಕ್ಕಾಗಿ, ಸಂತೋಷಕ್ಕಾಗಿ ಮತ್ತು ಮುಕ್ತಿಗಾಗಿ ಬುದ್ಧನು ಧಮ್ಮ ಚಕ್ರವನ್ನು ಚಲನೆಯಲ್ಲಿಟ್ಟದ್ದೂ ಈ ದಿನವೇ. ಅವರು ತಮ್ಮ ಪ್ರಥಮ ಪ್ರವಚನವನ್ನು ತನ್ನ ಹಿಂದಿನ ಸಹಚರರಾಗಿದ್ದ ಐದು ಜನ ಸಂನ್ಯಾಸಿಗಳಿಗೆ ನೀಡಿದರು.

ವಿಪಶ್ಯನವನ್ನು ಅಭ್ಯಾಸ ಮಾಡುತ್ತಾ ತಪಸ್ವಿ ಗೋತಮ, ಬುದ್ಧನಾಗಿದ್ದ. ವಿಪಶ್ಯನದ ಅಭ್ಯಾಸದಿಂದ ಪ್ರಕೃತಿಯ ನಿಯಮಗಳನ್ನು ಅನುಭವಿಸಿದಾಗ ಎಲ್ಲಾ ಅನುಮಾನಗಳು, ಸಿನಿಕತನ ಮಾಯವಾಗುತ್ತದೆ. ಅದೇ ರೀತಿ, ತಪಸ್ವಿ ಗೋತಮ, ಸಂಪೂರ್ಣ ಜ್ಞಾನೋದಯ ಹೊಂದಿದ ಮತ್ತು ಕಾರ್ಯ ಮತ್ತು ಕಾರಣದ ನಿಯಮವನ್ನು, ಅಂದರೆ ಅವಲಂಬಿತ ಉತ್ಪತ್ತಿಯ ಸರಪಳಿಯನ್ನು ಅರಿತುಕೊಂಡನು. ಅವನು ದುಃಖದ ಕಾರಣವನ್ನು, ಆ ಕಾರಣವನ್ನು ಅಳಿಸಿ ಹಾಕುವ ಮಾರ್ಗವನ್ನು, ಮನಸ್ಸಿನಲ್ಲಿರುವ ಎಲ್ಲಾ ಮಲಿನತೆಗಳನ್ನು ಅಳಿಸಿ ಹಾಕುವ ಮಾರ್ಗವನ್ನು ಅರಿತನು. ಅಂತಹ ಅತ್ಯಂತ ಪರಿಶುದ್ಧ ಜೀವಿಯು, ಮೋಡಗಳ ಮುಸುಕಿನಿಂದ ಹೊರ ಬಂದು ಪ್ರಕಾಶಿಸುವ ಸೂರ್ಯನಂತೆ ಪ್ರಕಾಶಿಸುತ್ತಾರೆ.

ಸಂಪೂರ್ಣ ಜ್ಞಾನೋದಯ ಪಡೆದ ಮೇಲೆ ಬುದ್ಧನು ಆಡಿದ ಸಂತೋಷಭರಿತ ಮಾತುಗಳು ಈ ರೀತಿ ಇದ್ದವು:

***ಅನೇಕ ಜಾತಿ ಸಂಸಾರಂ, ಸಂಧಾವಿಸ್ಸಂ ಅನಿಬ್ಬಿಸಂ, ಗಹಕಾರಕಂ ಗವೇಸಂತೋ, ದುಕ್ಖಾ ಜಾತಿ ಪುನಪ್ಪುನಂ. ಗಹಕಾರಕ ದಿಟ್ಠೋಸಿ, ಪುನ ಗೇಹಂ ನ ಕಾಹಸಿ, ಸಬ್ಬಾ ತೇ ಫಾಸುಕಾ ಭಗ್ಗಾ, ಗಹಕೂಟಂ ವಿಸಂಖಿತಂ, ವಿಸಂಖಾರಗತಂ ಚಿತ್ತಂ ತಣ್ಹಾನಂ ಖಯಮಜ್ಝಗಾ.***

(ಧಮಪದ 153–154, ಜರವಗ್ಗೊ)

ಈ ಮನೆಯ (ದೇಹದ) ಸೃಷ್ಟಿಕರ್ತನನ್ನು ಹುಡುಕುತ್ತಾ ನಾನು ಲೆಕ್ಕವಿಲ್ಲದಷ್ಟು ಜನ್ಮವೆತ್ತಿದ್ದೇನೆ. ಆದರೆ ಪ್ರತಿಯೊಂದು ಜನ್ಮದಲ್ಲೂ ನಾನು ಸಾಧಿಸಿದ್ದೆಲ್ಲಾ ದುಃಖವೇ ಆಗಿತ್ತು. ಓ, ಈ ಮನೆಯ ಸೃಷ್ಟಿಕರ್ತನೇ, ಈಗ ನಿನ್ನನ್ನು ನೋಡಿಯಾಗಿದೆ. ಮತ್ತೆ ನೀನು ಇನ್ನೊಂದು ಮನೆಯನ್ನು (ಜನ್ಮವನ್ನು) ಕಟ್ಟಲಾರೆ. ಏಕೆಂದರೆ ನೀನು ಮನೆ ಕಟ್ಟಲು ಬೇಕಾದ ಕಟ್ಟಡದ ವಸ್ತುಗಳನ್ನೆಲ್ಲಾ (ಸಂಖಾರಗಳು) ಧ್ವಂಸ ಮಾಡಲಾಗಿದೆ. ಮನಸ್ಸು ಸಂಪೂರ್ಣವಾಗಿ ಶುದ್ಧವಾಗಿದೆ, ಎಲ್ಲಾ ಸಂಖಾರಗಳನ್ನು ಮತ್ತು ತೃಷ್ಣೆಯನ್ನು ತೆಗೆದುಹಾಕಲಾಗಿದೆ.

ತನ್ನ ಸ್ವಂತ ಮನಸ್ಸೇ ಬಹು ದೊಡ್ಡ ಸೃಷ್ಟಿಕರ್ತ ಎಂಬುದನ್ನು ಬುದ್ಧನು ಕಂಡ ಎಂಬುದು ಸ್ಪಷ್ಟವಾಗಿದೆ. ಸಂಖಾರಗಳನ್ನವಲಂಬಿಸಿ (ಆಳವಾಗಿ ಬೇರು ಬಿಟ್ಟ ನಿಯಮಾಧೀನ ಸ್ಥಿತಿ) ಅದು ಹೊಸ ಜೀವರೂಪಗಳನ್ನು ತಳೆಯುತ್ತಿರುತ್ತದೆ, ಮತ್ತು ಜನನ ಮತ್ತು ಮರಣದ ಚಕ್ರದಲ್ಲಿ ನಿರಂತರವಾಗಿ ತಿರುಗುತ್ತಿರುತ್ತದೆ. ***ನಿಬ್ಬಾಣ*** ವನ್ನು ತಲುಪಿ ಈ ಅಂತ್ಯವಿಲ್ಲದ ದುಃಖ ಚಕ್ರವನ್ನು ಅವನು ಮುರಿದಿದ್ದ.

***ನಿಬ್ಬಾಣ*** ದ ಪರಿಶುದ್ಧ ಆನಂದದಲ್ಲಿ ಏಳು ವಾರಗಳು ಧ್ಯಾನ ಮಾಡಿದ ಮೇಲೆ, ಬುದ್ಧನಲ್ಲಿ ಒಂದು ಆಲೋಚನೆ ಬಂದಿತು: "ಈ ಅಂತಿಮ ಸತ್ಯ, ಈ ಧಮ್ಮ, ಎಷ್ಟೊಂದು ಸೂಕ್ಷ್ಮವಾಗಿದೆ, ಎಷ್ಟೊಂದು ಅಮೂಲ್ಯವಾಗಿದೆ, ಇದನ್ನು ಸಾಧಿಸುವುದು ಎಷ್ಟೊಂದು ಕಷ್ಟ. ಇಂದ್ರಿಯ ಸುಖಗಳಲ್ಲಿ ಮತ್ತು ಅಜ್ಞಾನದಲ್ಲಿ ಮುಳುಗಿರುವ ಈ ಜನಗಳಿಂದ ಧರ್ಮದ ಇಂತಹ ಸೂಕ್ಷ್ಮ ಸತ್ಯಗಳನ್ನು ಹೇಗೆ ಅರ್ಥ ಮಾಡಿಕೊಳ್ಳಲು ಸಾಧ್ಯ ಎಂದು ಮನಸ್ಸಿನಲ್ಲಿ ವಿಚಾರ ಮಾಡಿದ. ಆ ಸಂದರ್ಭದಲ್ಲಿ ಒಂದು ವಿಚಿತ್ರ ಸನ್ನಿವೇಶ ಉದ್ಭವಿಸಿತು: ಎಲ್ಲಾ ದುಃಖದಿಂದ ಮುಕ್ತಿ ನೀಡುವ ಅತ್ಯಂತ ಪ್ರಯೋಜನಕಾರಿಯಾದ ಈ ಮಾರ್ಗವನ್ನು ಹಂಚಿಕೊಳ್ಳಲು ಸಾಧ್ಯವೇ ಎಂಬ ಸಂಶಯ, ಆಶ್ಚರ್ಯ ಎಲ್ಲಾ ಜೀವಿಗಳ ಬಗ್ಗೆ ಅನಂತ ಕರುಣೆಯನ್ನು ಹೊಂದಿರುವ ಬುದ್ಧನಲ್ಲಿ ಮೂಡಿತು.

ಆಗ ಬುದ್ಧನ ಆಲೋಚನೆಗಳನ್ನು ಅರಿತ ಸಹಂಪತಿ ಎಂಬ ಹೆಸರಿನ ಒಬ್ಬ ಬ್ರಹ್ಮ ಬುದ್ಧನ ಹತ್ತಿರ ಬಂದು, ತನ್ನ ಗೌರವವನ್ನು ಸೂಚಿಸಿದ ಮತ್ತು ಧಮ್ಮವನ್ನು ಬೋಧಿಸಲು ಬುದ್ಧನನ್ನು ವಿನಂತಿಸಿಕೊಂಡ. "ತಪ್ಪು ಅಭಿಪ್ರಾಯಗಳ ಈ ಪ್ರಪಂಚದಲ್ಲಿ ಬಹಳ ಜನರು ಅಜ್ಞಾನದ ಪರದೆಯಿಂದ ಮುಚ್ಚಲ್ಪಟ್ಟಿರುವುದು ನಿಜ. ಅದರೂ ಈ ಪರದೆಯ ತೆಳುವಾಗಿರುವ ಮತ್ತು ಅದನ್ನು ಸುಲಭವಾಗಿ ತೆಗೆದು ಹಾಕಬಹುದಾದ ಹಂತವನ್ನು ತಲುಪಿರುವ ಜನರಿದ್ದಾರೆ. ಅಂತಹ ಜನರು ಈ ಪರಿಶುದ್ಧ ಮತ್ತು ಮೂಲರೂಪದಲ್ಲಿರುವ ಧಮ್ಮವನ್ನು ತಕ್ಷಣ ಗ್ರಹಿಸಬಹುದು" ಎಂದು ಹೇಳಿದನು. ಬ್ರಹ್ಮ ಸಹಂಪತಿಯ ಈ ಕೋರಿಕೆಯಿಂದಾಗಿ ಧಮ್ಮ ಚಕ್ರವನ್ನು ಚಲನೆಯಲ್ಲಿಡಲು ಬುದ್ಧನು ನಿರ್ಧರಿಸಿದ.

ನಂತರ, ಈ ಧಮ್ಮವನ್ನು ಯಾರಿಗೆ ಮೊದಲು ಬೋಧಿಸಬೇಕು ಎಂಬುದರ ಬಗ್ಗೆ ಆಲೋಚಿಸಿದ. ಹಿಂದಿನ ತನ್ನ ಗುರುಗಳಾದ ***ಆಲಾರ ಕಾಲಾಮ*** ರನ್ನು ಕೃತಜ್ಞತೆಯಿಂದ ಜ್ಞಾಪಿಸಿಕೊಂಡರು. ಆದರೆ, ***ಆಲಾರ ಕಾಲಾಮ*** ರು ಒಂದು ವಾರದ ಹಿಂದೆಯೇ ಮರಣ ಹೊಂದಿರುವುದನ್ನು ತನ್ನ ದಿವ್ಯದೃಷ್ಟಿಯಿಂದ ಬುದ್ಧ ಭಗವಾನರು ನೋಡಿದರು. ನಂತರ ಅವರ ಆಲೋಚನೆಗಳು ತನ್ನ ಇನ್ನೊಬ್ಬ ಗುರುಗಳಾದ ***ಉದಕ ರಾಮಪುತ್ತರ*** ಕಡೆ ತಿರುಗಿದವು. ಅವರೂ ಸಹ ಹಿಂದಿನ ರಾತ್ರಿಯೇ ನಿಧನರಾಗಿರುವುದನ್ನು ಕಂಡರು.

ನಂತರ ಬುದ್ಧನು ಕಪಿಲ ವಸ್ತುವಿನ ಐದು ಜನ ಬ್ರಾಹ್ಮಣ ಸಂನ್ಯಾಸಿಗಳ ಬಗ್ಗೆ ಚಿಂತಿಸಿದ. ಆರು ವರ್ಷಗಳ ಕಠೋರ ದೇಹದಂಡನೆ ಅಭ್ಯಾಸ ಮಾಡುವಾಗ ಇವರು ಬುದ್ಧನ ಸಹಚರರಾಗಿದ್ದರು. ಬೋಧಿಸತ್ವನು ಬುದ್ಧನಾದಾಗ ಮುಕ್ತಿಯ ಮಾರ್ಗವನ್ನು ನಮಗೆ ಬೋಧಿಸುತ್ತಾನೆ ಎಂಬ ನಿರೀಕ್ಷೆಯಿಂದ ಅವನಿಗೆ ಸೇವೆ ಮಾಡಿದ್ದರು. ದೇಹಕ್ಕೆ ಆಹಾರ ಕೊಡದೇ ದಮನ ಮಾಡುವಂತಹ ಅತಿರೇಕದ ದೇಹದಂಡನೆಗಳನ್ನು ನಿರುಪಯುಕ್ತ ಎಂದು ಕೈಬಿಟ್ಟು ಮಧ್ಯಮ ಮಾರ್ಗವನ್ನು ರಾಜಕುಮಾರ ಸಿದ್ಧಾರ್ಥ ಯಾವಾಗ ಹಿಡಿದನೋ ಆಗ ಈ ಐದೂ ಜನ ಸಹಚರರು ಭ್ರಮನಿರಸನಗೊಂಡು ಅವನನ್ನು ಬಿಟ್ಟು ಹೊರಟುಹೋದರು. ವಾರಣಾಸಿಯ ಹತ್ತಿರ ರಿಷಿಪಟ್ಟಣದಲ್ಲಿ ಅವರು ಇರುವುದನ್ನು ಬುದ್ಧ ಕಂಡನು. ಅವರಿಗೆ ಈ ಅಮೂಲ್ಯವಾದ ಧಮ್ಮವನ್ನು ಬೋಧಿಸಲು ಅವನು ನಿರ್ಧರಿಸಿದ.

ಐದು ಜನ ತಪಸ್ವಿಗಳು, ಬುದ್ಧ ತಮ್ಮ ಕಡೆಗೆ ಬರುತ್ತಿರುವುದನ್ನು ದೂರದಿಂದಲೇ ಕಂಡರು ಮತ್ತು ಅವನಿಗೆ ಗೌರವ ಸೂಚಿಸುವುದಾಗಲಿ ಅಥವಾ ಸೇವೆಯನ್ನಾಗಲಿ ಮಾಡುವುದಿಲ್ಲ ಎಂದು ನಿರ್ಧರಿಸಿದರು.

ಆದರೆ ಬುದ್ಧನು, ಮೈತ್ರಿಯ ಪರಿಶುದ್ಧ ಪ್ರೀತಿ ಮತ್ತು ಕರುಣೆಯ ತರಂಗಗಳನ್ನು ಹೊರ ಸೂಸುತ್ತಾ ಅವರ ಕಡೆಗೆ ನಡೆದು ಬಂದಾಗ ಅವರ ಮುನಿಸು ಕರಗಿ ಹೋಯಿತು. ಬುದ್ಧನನ್ನು ಅತೀವ ಗೌರವದಿಂದ ಸ್ವಾಗತಿಸಿದರು. ಕುಳಿತುಕೊಳ್ಳಲು ಅವರಿಗೆ ಆಸನವನ್ನು ಸಿದ್ಧಪಡಿಸಿದರು ಮತ್ತು ಅವರ ಸೇವೆ ಮಾಡಿದರು.

ಯಾರು ಕಠೋರ ದೇಹದಂಡನೆಗಳನ್ನು ಮಾಡುತ್ತಾರೋ ಅವರು ಮಾತ್ರ ಜ್ಞಾನೋದಯ ಪಡೆಯಲು ಸಾಧ್ಯ ಎಂಬ ತಪ್ಪು ಅಭಿಪ್ರಾಯಗಳನ್ನು ಈ ಐದು ಜನ ತಪಸ್ವಿಗಳು ಹೊಂದಿದ್ದರು. ಕೆಲವು ವೇಳೆ ತಪ್ಪು ಅಭಿಪ್ರಾಯಗಳಿಗೆ ನಾವು ಎಷ್ಟೊಂದು ಅಂಟಿಕೊಂಡಿರುತ್ತೇವೆಂದರೆ, ಅಜ್ಞಾನದಿಂದ ನಾವು ಎಷ್ಟು ಕುರುಡರಾಗಿದ್ದೇವೆ ಎಂಬುದನ್ನು ನೋಡಲು ನಿರಾಕರಿಸುತ್ತೇವೆ ಮತ್ತು ಸತ್ಯವನ್ನು ಗುರುತಿಸುವುದೂ ಇಲ್ಲ, ಒಪ್ಪಿಕೊಳ್ಳುವುದೂ ಇಲ್ಲ. ಸ್ವತಃ ದೇಹದಂಡನೆ ಮಾಡಿಕೊಳ್ಳುವ ಮಾರ್ಗವನ್ನು ಬದಲಾಯಿಸಿದವನು ಸಂಪೂರ್ಣ ಜ್ಞಾನೋದಯ ಪಡೆಯಲು ಸಾಧ್ಯ ಎಂಬುದನ್ನು ಒಪ್ಪಿಕೊಳ್ಳಲು ಅವರಿಗೆ ಕಷ್ಟವಾಯಿತು. ಆದರೆ ಬುದ್ಧನನ್ನು ಭೇಟಿಯಾಗಿ ಮಾತುಕತೆ ನಡೆಸಿದ ನಂತರ ಅವನು ಪೂರ್ಣ ಜ್ಞಾನೋದಯವನ್ನು ಪಡೆದಿದ್ದಾನೆಂಬುದು ಅವರಿಗೆ ಪೂರ್ತಿ ಮನವರಿಕೆಯಾಯಿತು. ಅದೇ ದಿನವೇ ಬುದ್ಧ ತನ್ನ ಪ್ರಥಮ ಪ್ರವಚನವನ್ನು ನೀಡಿದರು ಮತ್ತು ಧಮ್ಮ ಚಕ್ರವನ್ನು ಚಲನೆಯಲ್ಲಿಟ್ಟರು. ಅಪರಿಮಿತ ಪ್ರಯೋಜನಕಾರಿಯಾದ ಆ ದಿನವನ್ನು ಆಷಾಢ ಪೂರ್ಣಿಮೆ ಎಂದು ಗುರುತಿಸಲಾಗಿದೆ.

ಬ್ರಹ್ಮಾಂಡದ ಚಕ್ರಕ್ಕಿಂತ, ಜೀವನ ಚಕ್ರಕ್ಕಿಂತ ಈ ಧಮ್ಮ ಚಕ್ರವು ಹೇಗೆ ಭಿನ್ನವಾಗಿದೆ? ಅಲ್ಲಿಯ ತನಕ ತಿಳಿಯದೇ ಇರುವ ಯಾವ ಸತ್ಯಗಳನ್ನು ಬುದ್ಧ ಬೋಧಿಸಿದ? ಅದು ಕ್ರಾಂತಿಕಾರಿ ಬೋಧನೆಯಾಗಿತ್ತು. ಅದು ಜೀವನ ಚಕ್ರಕ್ಕೆ ತದ್ವಿರುದ್ಧವಾಗಿರುವುದರಿಂದ ಚಲನೆಯಲ್ಲಿಡುವುದು ಬಹಳ ಕಷ್ಟ. ಪ್ರಾಪಂಚಿಕ ಅಭಿಪ್ರಾಯಗಳ ದಿಕ್ಕಿನಲ್ಲಿ ಪ್ರವಹಿಸುವ ಅಭಿಪ್ರಾಯಗಳನ್ನು ಚಲನೆಯಲ್ಲಿಡುವುದು ಸುಲಭ. ಆದರೆ ತನ್ನ ಕೈಯಿಂದಲೇ ನದಿಯ ಹರಿವನ್ನು ಹಿಮ್ಮುಖ ಮಾಡುವುದು ಎಷ್ಟೊಂದು ಕಷ್ಟವಾಗಬಹುದು! ಅಜ್ಞಾನದ ಕತ್ತಲೆಯಿರುವಲ್ಲಿ ಧಮ್ಮದ ಸತ್ಯವನ್ನು ಚಲನೆಯಲ್ಲಿಡುವುದು ಅದಕ್ಕಿಂತಲೂ ಹೆಚ್ಚು ಕಷ್ಟ. ಒಂದು ಸಣ್ಣ ಬಟ್ಟಲಿನಲ್ಲಿರುವ ನೀರನ್ನು ಮೊದಲು ಎಡದಿಂದ ಬಲಕ್ಕೆ ನಂತರ ಬಲದಿಂದ ಎಡಕ್ಕೆ ತಿರುಗಿಸಿದಾಗ ಅದೂ ಸಹ ಪ್ರಕ್ಷುಬ್ಧವಾಗುತ್ತದೆ. ಧಮ್ಮ ಚಕ್ರವನ್ನು ಚಲನೆಯಲ್ಲಿಟ್ಟಾಗ ಇನ್ನೆಷ್ಟು ಅಧಿಕ ಪ್ರಕ್ಷುಬ್ಧತೆಯಿರುತ್ತದೆ!

ಅಥವಾ, ಭೂಮಿಯನ್ನು ವಿರುದ್ಧ ದಿಕ್ಕಿನಲ್ಲಿ ಚಲಿಸುವಂತೆ ಮಾಡುವುದು ಎಷ್ಟು ಕಷ್ಟ ಮತ್ತು ಪರಿಣಾಮಗಳು ಎಷ್ಟು ಪ್ರಕ್ಷುಬ್ಧವಾಗಿರುತ್ತವೆ ಎಂಬುದನ್ನು ಯೋಚಿಸಿ: ಪರ್ವತಗಳು ಕುಸಿಯಬಹುದು, ನದಿಗಳು ಪಾತ್ರ ಬದಲಾಯಿಸಬಹುದು ಮತ್ತು ಭೂಕಂಪಗಳಾಗಬಹುದು. ಅಂತಹ ಬೃಹತ್ತಾದ ಒಂದು ಕೆಲಸಕ್ಕೆ ಬುದ್ಧನು ಕೈ ಹಾಕಿದ. ತನ್ನ ಹತ್ತು ***ಪಾರಮಿ***ಗಳ ಅಸಾಧಾರಣ ಶಕ್ತಿಯನ್ನು ಅವನು ಉಪಯೋಗಿಸಿದ; ವೇಗವಾಗಿ ಮತ್ತು ರೋಷೋನ್ಮತ್ತ ರೀತಿಯಲ್ಲಿ ತಿರುಗುತ್ತಿರುವ ದುಃಖ ಚಕ್ರವನ್ನು ಹಿಂದಕ್ಕೆ ತಿರುಗಿಸಿದ ಮತ್ತು ಮುಕ್ತಿಯ ಚಕ್ರವನ್ನು ಚಲನೆಯಲ್ಲಿಟ್ಟ. ಆದ್ದರಿಂದ ಈ ಕ್ರಾಂತಿಕಾರಕ ದಿನ, ಧಮ್ಮ ಚಕ್ರವನ್ನು ನಮ್ಮ ಈ ಪ್ರಪಂಚದಲ್ಲಿ ಚಲನೆಯಲ್ಲಿಟ್ಟ ದಿನ ಬಹಳ ಮಹತ್ವದ್ದಾಗಿದೆ.

ನಮ್ಮ ಎಲ್ಲಾ ದುಃಖಗಳಿಗೆ, ಹುಟ್ಟು ಮತ್ತು ಸಾವಿನ ಚಕ್ರಕ್ಕೆ ಮನಸ್ಸಿನಲ್ಲಿರುವ ಮಲಿನತೆಗಳು ನಿಜವಾದ ಕಾರಣ ಎಂಬ ಸತ್ಯವನ್ನಷ್ಟೇ ಬುದ್ಧನು ಪ್ರಕಟಿಸಲಿಲ್ಲ, ಈ ಮಲಿನತೆಗಳನ್ನು ನಿರ್ಮೂಲನೆ ಮಾಡುವ ಮಾರ್ಗವನ್ನೂ ಬೋಧಿಸಿದನು. ಒಬ್ಬ ವ್ಯಕ್ತಿಯು ತನ್ನದೇ ಸ್ವಂತ ಉತ್ಪನ್ನ. ಅದು ಯಾವುದೋ ಒಂದು ಸರ್ವಶಕ್ತ ದೇವರ ಕೃಪೆ ಅಥವಾ ಶಾಪವಲ್ಲ. ಭೂತಕಾಲದ ನಮ್ಮ ಸತ್ಕರ್ಮಗಳು ಅಥವಾ ದುಷ್ಕರ್ಮಗಳ (ಕಮ್ಮಗಳು) ಫಲವೇ ವರ್ತಮಾನ. ನಾವು ಈಗ ಆಯ್ಕೆ ಮಾಡಿಕೊಳ್ಳುವ ಕ್ರಿಯೆಗಳೇ ನಮ್ಮ ಭವಿಷ್ಯಕ್ಕೆ ಬೀಜವಾಗುತ್ತವೆ. ನಮ್ಮ ಸೃಷ್ಟಿಕರ್ತರು ನಾವೇ. ಆದ್ದರಿಂದ ನಮ್ಮನ್ನು ನಾವು ಮಾತ್ರ ಎಲ್ಲಾ ದುಃಖಗಳಿಂದ ಮುಕ್ತಗೊಳಿಸಿಕೊಳ್ಳಲು ಸಾಧ್ಯ.

ನಮ್ಮ ಎಲ್ಲಾ ಕ್ರಿಯೆಗಳ ಫಲಗಳು ಕೇವಲ ಒಂದು ಜನ್ಮದಲ್ಲಿ ಪಕ್ವವಾಗುವುದಿಲ್ಲ; ಮುಂಬರುವ ಅನೇಕ ಜನ್ಮಗಳಲ್ಲಿ ಸಂತೋಷಕರ ಮತ್ತು ಅಸಂತೋಷಕರ ಸ್ಥಿತಿಗಳನ್ನು ನಮಗೆ ಕೊಡಲು ಸರಿಯಾದ ಸಮಯದಲ್ಲಿ ಅವು ಪಕ್ವವಾಗುತ್ತವೆ ಎಂದು ಬುದ್ಧನು ಸ್ಪಷ್ಟಪಡಿಸಿದ. ನಮಗೆ ಹೊಸ ಜನ್ಮಗಳನ್ನು ತರುವ ಮನಸ್ಸಿನ ಎಲ್ಲಾ ರೂಢಿಗಳು (ಸಂಖಾರಗಳು) ಸ್ವಭಾವಿಕವಾಗಿಯೇ ಬದಲಾಗುತ್ತಿರುತ್ತವೆ, ಅಶಾಶ್ವತವಾಗಿವೆ ಎಂಬ ಸತ್ಯವನ್ನು ಸ್ಪಷ್ಟಪಡಿಸಲಾಯಿತು. ಅವು ಉದಯವಾಗುತ್ತವೆ ಮತ್ತು ನಾಶವಾಗುತ್ತವೆ. ಇದನ್ನು ತಿಳಿದುಕೊಂಡು ಸಾವಿಲ್ಲದಿರುವ ನಿಬ್ಬಾಣದ ಸ್ಥಿತಿಯನ್ನು– ಅಲ್ಲಿ ಏನೂ ಉದಯವಾಗುವುದಿಲ್ಲ, ಏನೂ ನಾಶವಾಗುವುದಿಲ್ಲ– ಈ ಮನಸ್ಸು ಮತ್ತು ಶರೀರ (ನಾಮ–ರೂಪ) ರಚನೆಯಲ್ಲಿಯೇ, ಈ ಜನ್ಮದಲ್ಲಿಯೇ ಅನುಭವಿಸಬಹುದಾಗಿದೆ. ಇದು ಧಮ್ಮ ಚಕ್ರದ ಮೂಲತತ್ವವಾಗಿದೆ. ದುಃಖ ಇದ್ದರೆ, ಆಗ ಈ ದುಃಖದ ಕಾರಣ ಇರುತ್ತದೆ. ಕಾರಣ ಇದ್ದರೆ, ಆಗ ಅದನ್ನು ನಿರ್ಮೂಲ ಮಾಡಬಹುದು. ಕಾರಣವನ್ನು ನಿರ್ಮೂಲ ಮಾಡಬಹುದಾದರೆ ಆಗ ಅದನ್ನು ನಿರ್ಮೂಲ ಮಾಡುವ ಮಾರ್ಗ ಇರುತ್ತದೆ.

ಬುದ್ಧನು ಬೋಧಿಸಿದ ವಿಪಶ್ಯನದ ಅಭ್ಯಾಸ ಮಾಡುತ್ತಾ ಧಮ್ಮ ಮಾರ್ಗದಲ್ಲಿ ನಡೆದು ಯಾರೇ ಆದರೂ ಮಲಿನತೆಗಳನ್ನು ನಿರ್ಮೂಲ ಮಾಡಬಹುದು ಮತ್ತು ಮನಸ್ಸನ್ನು ಪೂರ್ಣ ಶುದ್ಧಿ ಮಾಡಬಹುದು. ಅಂತಹ ವ್ಯಕ್ತಿ ಸುಲಭವಾಗಿ ಮುಕ್ತನಾಗಬಹುದು. ವ್ಯಕ್ತಿಯು ಒಬ್ಬ ಒಳ್ಳೆಯ ಗುರುವನ್ನು ಪಡೆದರೆ, ಕೂಡಿಟ್ಟ ಹಿಂದಿನ ಪಾರಮಿಗಳು ತನ್ನ ಲೆಕ್ಕಕ್ಕಿದ್ದರೆ, ಮತ್ತು ಈ ಜನ್ಮದಲ್ಲಿಯೇ ಶ್ರಮಪಟ್ಟು ಕೆಲಸ ಮಾಡಲು ತಯಾರಿದ್ದಾನೆ ಮತ್ತು ವಿಪಶ್ಯನವನ್ನು ಅಭ್ಯಾಸ ಮಾಡುತ್ತಿದ್ದಾನೆ – ಹಾಗಾದರೆ ಅಂತಹ ವ್ಯಕ್ತಿಯು ಈ ಜನ್ಮದಲ್ಲಿಯೇ ತನ್ನ ಎಲ್ಲಾ ದುಃಖಗಳನ್ನು ಸಂಪೂರ್ಣ ಮೂಲೋತ್ಪಾಟನೆ ಮಾಡಲು ಸಾಧ್ಯವಾಗದಿರುವುದಕ್ಕೆ ಯಾವ ಕಾರಣವೂ ಇರುವುದಿಲ್ಲ.

ವಿಪಶ್ಯನದಿಂದ ವ್ಯಕ್ತಿಯು ಶ್ರೇಷ್ಠ ಅಷ್ಟಾಂಗ ಮಾರ್ಗವಾದ ಶೀಲ, ಸಮಾಧಿ ಮತ್ತು ಪನ್ಯವನ್ನು ಅಭ್ಯಾಸ ಮಾಡುತ್ತಾನೆ. ತಪ್ಪು ಬೌದ್ಧಿಕ ತತ್ವಚಿಂತನೆಗಳನ್ನು ಮತ್ತು ಮೂಢ ನಂಬಿಕೆಗಳನ್ನು ವ್ಯಕ್ತಿಯು ತ್ಯಜಿಸುತ್ತಾನೆ ಮತ್ತು ಎಲ್ಲಾ ದುಃಖಗಳಿಂದ ಬಿಡುಗಡೆ ಮಾಡುವ ಮುಕ್ತಿಯ ಮಾರ್ಗದಲ್ಲಿ ನಡೆಯುತ್ತಾನೆ. ಇದು ಧಮ್ಮ ಚಕ್ರವನ್ನು ಚಲನೆಯಲ್ಲಿಡುವುದು. ಇದು ಈ ದಿನದ ಪ್ರಾಮುಖ್ಯತೆಯಾಗಿದೆ.

ನಮ್ಮ ಒಳಿತಿಗಾಗಿ, ಮತ್ತು ಈ ಒಳಿತನ್ನು ಎಲ್ಲಾ ಜೀವಿಗಳ ಜೊತೆ ಹಂಚಿಕೊಳ್ಳಲು, ಎಲ್ಲಾ ದುಃಖಗಳಿಂದ ಹೊರ ಬರಲು ಮತ್ತು ನಿಜವಾದ ಶಾಂತಿ ಮತ್ತು ಸಂತೋಷವನ್ನು ಅನುಭವಿಸಲು ನಾವೂ ಸಹ ವಿಪಶ್ಯನದ ಅಭ್ಯಾಸ ಮಾಡುತ್ತಾ ನಮ್ಮ ಜೀವನದಲ್ಲಿಯೂ ಧಮ್ಮ ಚಕ್ರವನ್ನು ಚಲನೆಯಲ್ಲಿಡಬೇಕು.

ಸಕಲ ಜೀವಿಗಳೂ ಮುಕ್ತಿ ಹೊಂದಲಿ.

## ಹದಿಹರೆಯದವರಿಗೆ ವಿಪಶ್ಯನ ಧ್ಯಾನ ಶಿಬಿರಗಳು

ಹದಿಹರೆಯದವರಿಗೆ ಸೂಕ್ತವಾಗುವಂತಹ 7 ದಿವಸಗಳ ವಸತಿ ವಿಪಶ್ಯನ ಶಿಬಿರವು ಪ್ರಪ್ರಥಮ ಬಾರಿಗೆ ಏಪ್ರಿಲ್ 2004ರಲ್ಲಿ ದಮ್ಮಗಿರಿಯಲ್ಲಿ ಪರಿಚಯಿಸಲ್ಪಟ್ಟಿತು. ಈ ಶಿಬಿರದಿಂದ ವಿಪಶ್ಯನ ಧ್ಯಾನ ವಿಧಿಯ ದ್ವಾರಗಳು ಹದಿಹರೆಯದವರಿಗೆ ತೆರೆಯಲಟ್ಟವು. ಅಲ್ಲಿಂದೀಚೆಗೆ ಹದಿಹರೆಯರ ಶಿಬಿರವು ಭಾರತ, ಮ್ಯಾನ್‌ಮಾರ್, ನೇಪಾಳ ದೇಶಗಳಲ್ಲಿ ಆಯೋಜಿಸಲ್ಪಡುತ್ತಿವೆ. ಈಗ ನಾವು ಪ್ರಪ್ರಥಮ ಬಾರಿಗೆ ದಮ್ಮ ಫಘುಲ್ಲ, ಬೆಂಗಳೂರಿನಲ್ಲಿ 7 ದಿವಸಗಳ ವಿಪಶ್ಯನ ಶಿಬಿರವನ್ನು ಹದಿಹರೆಯದವರಿಗೆ ಪರಿಚಯಿಸುತ್ತಿದ್ದೇವೆ. 14ವರ್ಷಗಳ ಕೆಳಗಿನ ಮಕ್ಕಳಲ್ಲಿ ಕಾಣುವಂತಹ ಮುಗ್ದತೆಯು ಇವರಿಗೆ ಇನ್ನಿಲ್ಲ, ಈಗ ಸಂಪೂರ್ಣ ಪಕ್ವತೆಯುಳ್ಳ ಪ್ರೌಢ ವಯಸ್ಕರಂತೆಯೂ ಇರುವುದಿಲ್ಲ. ಇಂತಹ ಗುಂಪಿನ ಮಕ್ಕಳನ್ನು ಗೋಯೆಂಕಾಜಿಯವರು "ಸಂಜೆಬೆಳಕಿನಂತಹವರು" ಎಂಬ ಸರಿಯಾದ ರೂಪಕದಿಂದ ವರ್ಣಿಸಿದ್ದಾರೆ. ಗೋಯೆಂಕಾಜಿಯವರು ಈ ತರಹದ ಶಿಬಿರಗಳ ಹಿಂದಿರುವ ತಾರ್ಕಿಕ ಸಮರ್ಥನೆಯನ್ನು ಹೀಗೆ ನೀಡುತ್ತಾರೆ.

" ನೀವು ಈಗ ವಯಸ್ಕರ ಮತ್ತು ಹದಿಹರೆಯ ಅವಧಿಯ ಮಧ್ಯೆ ಇರುವ ಅವಸ್ಥೆ ಅರ್ಥಾತ್ ಪ್ರೌಢಾವಸ್ಥೆಯ ಹೊಸ್ತಿಲಲ್ಲಿ ಇದ್ದೀರಿ. ಶೀಘ್ರದಲ್ಲಿಯೇ ನೀವು ಪೂರ್ಣ ಪ್ರಮಾಣದ ಪ್ರೌಢ ವಯಸ್ಕರಾಗುವಿರಿ. ಈ ಸಂಕ್ರಮಣ ಕಾಲವು ಬಹಳ ಮಹತ್ವದ್ದಾಗಿದೆ. ಈಗ ನಿಮ್ಮನ್ನು ನೀವು ಪರಿಪಕ್ವಗೊಳಿಸಿಕೊಂಡರೆ ಆಗ ನಿಮ್ಮ ಮನಸ್ಸನ್ನು ನೀವು ಹೇಗೆ ಬಯಸುತ್ತೀರೋ ಹಾಗೆಯೇ ನಡೆದುಕೊಳ್ಳುವಂತೆ ಮಾಡಬಹುದು. ಆದ್ದರಿಂದ ಸತತವಾಗಿ ನೀವು ಕೆಲಸ ಮಾಡುವುದು ಅತಿ ಮುಖ್ಯವಾಗಿದೆ. 7 ದಿನಗಳ ಅವಧಿಯು ಬಹಳ ಸಣ್ಣ ಅವಧಿಯುಳ್ಳದ್ದಾಗಿದೆ. ನಂತರ

ನೀವು 10 ದಿನಗಳ ಶಿಬಿರದಲ್ಲಿ ಭಾಗವಹಿಸಬಹುದು."

ಈ ಗಲಿಬಿಲಿಯ ಜೀವನದಲ್ಲಿ ಶೀಘ್ರದಲ್ಲಿಯೇ ತಮ್ಮ ಪ್ರಪ್ರಥಮ ಅಸ್ಥಿರ ಹೆಜ್ಜೆಗಳನ್ನು ಇಡಲು ಹೊರಟಿರುವ ಹದಿಹರೆಯದವರಿಗೆ ಈ ಧಮ್ಮದ ಬೀಜವು ಸಹಾಯವಾಗಬಲ್ಲದು ಎಂದು ಗೋಯಂಕಾಜಿಯವರು ಸ್ಪಷ್ಟವಾಗಿ ಪರಿಕಲ್ಪನೆ ಮಾಡಿದ್ದರು.

ವೇಗವಾಗಿ ಬದಲಾಗುತ್ತಿರುವ ಮತ್ತು ಬಿರುಕುಗೊಳ್ಳುತ್ತಿರುವ ಈ ಜಗತ್ತಿನಲ್ಲಿ ಈಗಿನ ಮಕ್ಕಳು ಬೆಳೆಯುತ್ತಿದ್ದಾರೆ. ಅವರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವರಿಗೆ ಸಹಾಯದ ಅವಶ್ಯಕತೆಯಿದೆ. ಅವರು ಶಾಂತಿಯುತವಾಗಿ ಬಾಳಿ ಸಮಾಜಕ್ಕೆ ಹೆಚ್ಚು ಪ್ರಯೋಜನಕಾರಿಯಾಗಲು ನಾವು ಒಂದು ಸೂಕ್ತಮಾರ್ಗವನ್ನು ನೀಡಬೇಕಾಗಿದೆ. ಗೋಯಂಕಾಜಿಯವರು ಹೇಳಿದ ಹಾಗೆ " ಅವರು ಬೆಳೆದು ಆದರ್ಶ ಮಾನವರಾಗಬೇಕು. ಅದೇ ನಮ್ಮ ಗುರಿಯಾಗಿದೆ. ಮುಂಬರುವ ಹದಿಹರೆಯರ ಶಿಬಿರವು ದಮ್ಮ ಫಘುಲ್ಲ, ಬೆಂಗಳೂರಿನಲ್ಲಿ ನಡೆಯಲಿದೆ.

ಶಿಬಿರದ ದಿನಾಂಕ : ಮೇ17, 2017 ರಿಂದ ಮೇ25, 2017ರವರೆಗೆ. 15ವಯಸ್ಸು ತುಂಬಿ 19ನೇ ವಯಸ್ಸಿನವರಿಗೆ–ಗಂಡು ಮಕ್ಕಳಿಗೆ ಮಾತ್ರ

ಭಾಗವಹಿಸಲು ಇಚ್ಛಿಸುವವರು ನೀತಿ ಸಂಹಿತೆಯ ನಿಯಮಗಳನ್ನು ಓದಬೇಕು ಮತ್ತು ಹದಿಹರೆಯೆ ಶಿಬಿರದ ಅರ್ಜಿಯನ್ನು ಎಲ್ಲಾ ವಿವರಣೆಗಳೊಂದಿಗೆ ಭರ್ತಿ ಮಾಡಬೇಕು. ಅದರ ಮೇಲೆ ತಂದೆ ತಾಯಂದಿರ ಅನುಮತಿಯು ದಾಖಲಾಗಬೇಕು. ತಂದೆ ತಾಯಂದಿರ ಸಹಿಯು ಅತ್ಯವಶ್ಯವಾಗಿದೆ.

ಅರ್ಜಿ ಪತ್ರ : http://www.vridhamma.org/uploadedfiles/teenappln-2014.pdf

ನೀತಿ ಸಂಹಿತೆ : https://www.dhamma.org/en/docs/core/codeteen-en-IN.pdf

ಮಾಹಿತಿ ಪಡೆಯಲು ದೂರವಾಣಿ ಸಂಖ್ಯೆ : 9480581708, 9980218474

ಅರ್ಜಿ ಪತ್ರದ ಸ್ಕ್ಯಾನ್ ಪ್ರತಿಯನ್ನು ಕೆಳಗಿನ email ಗೆ ಕಳುಹಿಸಿ: info@paphulla.dhamma.org

**ತಪೋದಾನ**

ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿಲ್ಲಿ ಹೊಸ ವಿಪಶ್ಯನ ಧ್ಯಾನ ಕೇಂದ್ರ ಸ್ಥಾಪನೆಯಾಗುತ್ತಿರುವುದು ಸಂತೋಷದ ವಿಷಯ. ಕರ್ನಾಟಕದಲ್ಲಿ ಇದು ಎರಡನೆಯ ವಿಪಶ್ಯನ ಧ್ಯಾನ ಕೇಂದ್ರ. ಆ ಸ್ಥಳದ ಧಮ್ಮ ತರಂಗಗಳನ್ನು ಬಲಗೊಳಿಸುವ ಸಲುವಾಗಿ ಪ್ರತಿ ತಿಂಗಳು ಎರಡನೆಯ ಶನಿವಾರ ಸಾಮೂಹಿಕ ಸಾಧನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ, ಹಳೆಯ ವಿಪಶ್ಯನ ಧ್ಯಾನ ಸಾಧಕರು ಈ ಸಾಮೂಹಿಕ ಸಾಧನೆಯಲ್ಲಿ ಪಾಲ್ಗೊಳ್ಳುವ ಮೂಲಕ ತಪೋದಾನ ನೀಡಬೇಕಾಗಿ ಕೋರಲಾಗಿದೆ.

ಧ್ಯಾನದ ಸ್ಥಳ ತಲುಪಲು ಮಾಹಿತಿಗಾಗಿ ಸಂಪರ್ಕಿಸಿ : 8880519658/8088648226. ನೋಂದಣಿಗಾಗಿ ಸಂಪರ್ಕ ಸಂಖ್ಯೆ : 9480581708.

## ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು: 2016** ಡಿಸೆಂಬರ್ 14–25. **2017** ಜನವರಿ 4–15, 18–29. ಫೆಬ್ರವರಿ 1–12, 15–26; ಮಾರ್ಚ್ 1–12, 15–26 ಏಪ್ರಿಲ್ 19–30, ಮೇ 3–14, 17–28, 31–11 ಜೂನ್. **ಮೂರು ದಿನದ ಶಿಬಿರ:** ಡಿಸೆಂಬರ್ 29 ರಿಂದ 01 ಜನವರಿ, ಏಪ್ರಿಲ್ 13 ರಿಂದ 16. **ಸತಿಪಟ್ಠಾನ ಶಿಬಿರಗಳು:** 2017 ಮಾರ್ಚ್ 31ರಿಂದ ಏಪ್ರಿಲ್ 8. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ದೂ.: 080–23712377, ಮೊಬೈಲ್: 7829912733, 8861644284, 9972588377,

ಇ–ಮೇಲ್:info@paphulla.dhamma.org; website: www.dhamma.org.

## ಬೆಂಗಳೂರಿನಲ್ಲಿ ಸಾಮೂಹಿಕ ಸಾಧನಾ ಶಿಬಿರಗಳ ಮಾಹಿತಿ

**ಪ್ರತಿ ಭಾನುವಾರ: ಜಯನಗರ:** ಬೆಳಿಗ್ಗೆ 8.30 ರಿಂದ 9.30ರವರೆಗೆ, ಸುರೇಶ್/ರಾಜೇಶ್ವರಿ – 98867 75401 **ಸರ್ಜಾಪುರ ರಸ್ತೆ:** ಬೆಳಿಗ್ಗೆ 9.00 ರಿಂದ 10.00, ನಿರ್ಮಲ್ ಬೋತ್ರಾ–93412 22999, ಸ್ವಾತಿ–93426 75811, **ಬಸವೇಶ್ವರ ನಗರ** ಬೆಳಿಗ್ಗೆ 8.00 ರಿಂದ 9.00ರವರೆಗೆ, ಶ್ರೀ ಮಂಜುನಾಥ: 098451 71600, ಹೇಮಂತ: 074118 74462, **ಮಲ್ಲೇಶ್ವರಂ:** 8.30ರಿಂದ 9.30ರವರೆಗೆ, ಶ್ರೀ ದಿನೇಶ್ ಕುಮಾರ್–99452 38441 **ಕೆಂಗೇರಿ:** ಸಂಜೆ 4.30ರಿಂದ 5.30ರವರೆಗೆ, ವಸಂತ್ ಜಾಜೋ–98453 95152, 98445 29309. **ಆರ್.ಎಂ.ವಿ. 2ನೇ ಹಂತ:** ಬೆಳಿಗ್ಗೆ 7.50ರಿಂದ 9.00ರವರೆಗೆ, ಶ್ರೀ ತಾರಕ್ ಗೋರಾಡಿಯಾ–99454 58593.

**ಪ್ರತಿ ಶನಿವಾರ: ವಿಜಯನಗರ:** ಸಂಜೆ 6–00 ರಿಂದ 7–00ರವರೆಗೆ, ತುಕಾರಾಮ್–97433 63339, ಪವನ್‌ಕುಮಾರ್–77607 52220.

**ಪ್ರತಿ ಮೊದಲ ಭಾನುವಾರ: ವೈಟ್‌ಫೀಲ್ಡ್:** ಬೆಳಿಗ್ಗೆ 9–30 ರಿಂದ 10–30ರವರೆಗೆ, ಶ್ರೀಮತಿ ವಲ್ಲರಿ/ರಾಜೇಶ್ ಮೊ.: 97403 22447

ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ: http://www.paphulla.dhamma.org/os/paphulla sittings.htm

## ಒಂದು ದಿನದ ಶಿಬಿರಗಳ ಮಾಹಿತಿ

**ಬೆಂಗಳೂರು:** ಪ್ರತಿ ಭಾನುವಾರ 10 ರಿಂದ 4 ಗಂಟೆ, ಧಮ್ಮ ಪಫುಲ್ಲ, ಆಲೂರು. **ಮೈಸೂರು:** ಪ್ರತಿ ತಿಂಗಳು 4ನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9481149553, 99801005309. **ಉಡುಪಿ:** ಪ್ರತಿ ತಿಂಗಳು ಎರಡನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9980897955 / 9449773942 9481149553. **ದಾವಣಗೆರೆ:** ಪ್ರತಿ ತಿಂಗಳು ಕೊನೆ ಭಾನುವಾರ. ಸಂಪರ್ಕ ಸಂಖ್ಯೆಗಳು: 9844245111 / 9986962762 9448588789 **ಹುಬ್ಬಳ್ಳಿ:** ಪ್ರತಿ ತಿಂಗಳು ಮೂರನೇ ಭಾನುವಾರ. ಸಂಪರ್ಕ ಸಂಖ್ಯೆ: 9880661506

**10 ದಿನದ ಶಿಬಿರ ಆಯೋಜಿಸುವವರು ಸಲಹೆ, ಸೂಚನೆಗಳಿಗಾಗಿ ಸಂಪರ್ಕಿಸಿ : ಸಂತೋಷ ಧರ್ಮರಾಜ್, ಬೆಂಗಳೂರು. ಮೊಬೈಲ್: 8762086089**

**10ದಿನದ ಶಿಬಿರದಲ್ಲಿ ಭಾಗವಹಿಸಲು ಆನ್‌ಲೈನ್ ನೋಂದಣಿ ಸಹಾಯಕ್ಕಾಗಿ ಸಂಪರ್ಕಿಸಿ.** ಬಳ್ಳಾರಿ: ಎ.ಮಲ್ಲಿಕಾರ್ಜುನಪ್ಪ, ಮೊ.ಸಂ. 9449511217. ಬೆಳಗಾವಿ: ವೀರನಗೌಡ ವಿ.ಸಾರನಾಡಗೌಡ್ರ, ಮೊ.ಸಂ.9902657335. ದಾವಣಗೆರೆ: ಉದಯ ಶಿವಕುಮಾರ್, ಮೊ.ಸಂ. 9739314581(ಮೆಸೇಜ್ ಮಾಡಿ, ಅವರೇ ಕರೆ ಮಾಡುತ್ತಾರೆ.) ಜಿ.ಟಿ.ಗೋವಿಂದಪ್ಪ, ಮೊ.ಸಂ.9448588789.

**ವಂತಿಗೆ : ವಾರ್ಷಿಕ: ರೂ. 30, ಆಜೀವ: ರೂ. 500. ಚೆಕ್ ಅಥವಾ ಡಿ.ಡಿ. ಪಡೆಯಬೇಕಾದ ಹೆಸರು : 'ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ'. ಪಾವತಿಸುವ ಸ್ಥಳ: ಬೆಂಗಳೂರು. ಬ್ಯಾಂಕ್ : ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ಚೆಕ್ ಅಥವಾ ಡಿಡಿಯ ಜೊತೆಗೆ ಸ್ವ ವಿಳಾಸದ ಚೀಟಿ ಇಡಿ**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

**ಮುದ್ರಿತ ವಿಷಯ** ತೆರೆದ–ಅಂಚೆ

ಗೆ,

ಇಂದ:

**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.